ಅಧ್ಯಕ್ಷರ ಆರ್ಜಿಯನ್ನು ಒಪ್ಪಿಸಲಾಗಿದೆ.

ಶ್ರೀ ಕೆ. ಕುಶಾಲ್ —ಮಾನ್ಯ ಅಧ್ಯಕ್ಷರೆ,ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕು ಕೇಂದ್ರಕ್ಕೆ ಬಸ್ಸು ಸೌಲಭ್ಯವನ್ನು ಹೆಚ್ಚಿಸುವ ಬಗ್ಗೆ ಆರ್ಜಿಯನ್ನು ಸದನದ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಆರ್ಜಿಯನ್ನು ಒಪ್ಪಿಸಲಾಗಿದೆ

ಗಮನ ಸೆಳೆಯುವ ಸೂಚನೆ

1 ಹುಬ್ಬಳ್ಳಿಯ ಆನಂದನಗರದ ಬಳಿ 300 ಗುಡಿಸಲುಗಳನ್ನು ತೆಗೆದುಹಾಕಿರುವುದು

ಶ್ರೀ ಎ ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯ ಆನಂದ್‌ನಗರದ ಹತ್ತಿರ ಮೂರು ನೂರು ಗುಡಿಸಲುಗಳನ್ನು ತೆಗೆದುಹಾಕಿರುವ ಬಗ್ಗೆ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಆಹಾರ ಮತ್ತು ಅರಣ್ಯ ಹಾಗೂ ನಗರಾಭಿವೃದ್ಧಿ ಮಂತ್ರಿ).—

ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ವ್ಯಾಪ್ತಿಯಲ್ಲಿರುವ ಕೃಷ್ಣಾಪುರದ ಸರ್ವೆ ನಂ. ೩೦/೧ ರಲ್ಲಿರುವ ೩ ಎಕರೆ ೨೮ ಗುಂಟೆ ಜಮೀನು ಹಾಗೂ ಆನಂದನಗರದ ಸರ್ವೆ ನಂ ೩೧ರಲ್ಲಿರುವ ೪ ಎಕರೆ ೧೫ ಗುಂಟೆ ಜಮೀನಿನಲ್ಲಿ ಸುಮಾರು ೨೮೦ ಅನಧಿಕೃತ ಗುಡಿಸಲುಗಳನ್ನು ಹಾಕಿದ್ದರು. ಹಾಕಲು ಪ್ರಯತ್ನಿಸುತ್ತಿದ್ದ ಸರ್ವೆ ನಂ. ೩೦/೧ ನಲ್ಲಿಯ ಜಾಗವನ್ನು ಸಂಬಂಧಪಟ್ಟ ನಿಯೋಜಿತ ಅಧಿಕಾರಿಗಳು (ಕಾಂಪಿಟೆಂಟ್ ಅಥಾರಿಟಿ) ನಗರ ಭೂ ಪರಿಮಿತಿ ಕಾನೂನಿನ ೧೦ (೩)ನೇ ಪ್ರಕರಣದಂತೆ ದಿನಾಂಕ ೧೧-೪-೮೯ರಲ್ಲಿ ಹೆಚ್ಚುವರಿ ಜಾಗವೆಂದು ಆಜ್ಞೆ ಹೊರಡಿಸಿದ್ದಾರೆ. ಆದುದರಿಂದ ಈ ಜಾಗವು ಸರ್ಕಾರದ ಸ್ವತ್ತಾಗಿರುತ್ತದೆ. ಮಂತ್ತು ಸರ್ವೆ ನಂ ೩೧ರಲ್ಲಿರುವ ಜಮೀನು ವ್ಯವಸಾಯದ ಜಮೀನಾಗಿದ್ದು, ಇದು ಖಾಸಗಿಯವರ ಸ್ವತ್ತಾಗಿರುತ್ತದೆ. ಸದರೀ ಅನಧಿಕೃತ ಗುಡಿಸಲುಗಳನ್ನು ತೆಗೆದುಹಾಕಲು ಮಹಾನಗರ ಸಭೆಯ ಸಂಬಂಧಪಟ್ಟ ಅಧಿಕಾರಿಗಳು ಮೌಖಿಕವಾಗಿ ಅನೇಕ ಸಲ ತಿಳಿಸಿದ್ದರೂ ಸಹ ಅವುಗಳನ್ನು ತೆಗೆದಿರಲಿಲ್ಲ. ಈ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಜನರು ತಮ್ಮ ವೈಯಕ್ತಿಕ ವಿಳಾಸಗಳನ್ನು ತಿಳಿಸಲು ಸಿದ್ಧರಿರಲಿಲ್ಲವಾದ್ದರಿಂದ ಮತ್ತು ಆ ನಿವಾಸಿಗಳು ಆಗ ತಾನೆ ಅಂದರೆ ಕೇವಲ ಕೆಲವು ದಿನಗಳು ಮುಂಚೆ ಅನಧಿಕೃತವಾಗಿ ಬಂದುದರಿಂದ ಅವರುಗಳಿಗೆ ವೈಯಕ್ತಿಕ ನೋಟೀಸುಗಳನ್ನು ಕೊಡಲು ಮಹಾನಗರಸಭೆಯ ಅಧಿಕಾರಿಗಳಿಗೆ ಸಾಧ್ಯವಾಗಲಿಲ್ಲ. ಆದರೂ ಕ್ಷೇತ್ರದಲ್ಲಿ ಚೆನ್ನಾಗಿ ಕಾಣುವ ಸ್ಥಳದಲ್ಲಿ ನೋಟೀಸ್ ಅಂಟಿಸಿ ಈ ವಿಷಯದಲ್ಲಿ ಪಂಚನಾಮೆಯನ್ನು ಮಾಡಲಾಯಿತು. ನಂತರ ಮಹಾನಗರಸಭೆಯ, ನಗರ ಯೋಜನೆಯ ಉಪನಿರ್ದೇಶಕರುಗಳು, ನಗರಾಭಿವೃದ್ಧಿ ಮಂಡಳಿಯ ಕಾರ್ಯದರ್ಶಿ, ನಗರಯೋಜನಾ ಪ್ರಾಧಿಕಾರದ ಕಾರ್ಯದರ್ಶಿ ಹಾಗೂ ಕಂದಾಯ ಮತ್ತು ಪೋಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ದಿನಾಂಕ ೩೦-೧-೧೯೮೭ರಂದು ಈ ಅನಧಿಕೃತವಾಗಿ ಹಾಕಲಾದ ಗುಡಿಸಲುಗಳನ್ನು ತೆಗೆದುಹಾಕಲಾಯಿತು.

ಈಗ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಮುಂದೆ, ಬಡವರಿಗಾಗಿ ಸರಕಾರಿ ಜಮೀನನ್ನು ಪರಿವರ್ತಿಸಿ ೭೦೦೦ ನಿವೇಶನಗಳನ್ನು ಹಂಚುವ ಪ್ರಸ್ತಾವವಿದೆ. ಆ ಪ್ರಸ್ತಾವವನ್ನು ಕಾರ್ಯಗತ ಗೊಳಿಸಿ ಬಡವರಿಗಾಗಿ ನಿವೇಶನಗಳನ್ನು ಹಂಚಲು ನಿರ್ಣಯಿಸಿದಲ್ಲಿ, ಈಗ ತೆಗೆದುಹಾಕಿದ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಜನರು ಅರ್ಜಿ ಮಾಡಿದಲ್ಲಿ ಅವರ ಬೇಡಿಕೆಗಳನ್ನು ಪರಿಗಣಿಸಲಾಗುವುದು.

ಶ್ರೀ ಎ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯ ಆನಂದ್ ನಗರದ ಹತ್ತಿರ ಸರ್ವೆ ನಂಬರ್ ೩೦-೧ ಮತ್ತು ೩೧ನೇ ಜಾಗದಲ್ಲಿ ೩೦೦ ಗುಡಿಸಲುಗಳನ್ನು ತೆಗೆದುಹಾಕಿದ್ದಾರೆ. ಹುಬ್ಬಳ್ಳಿಯಿಂದ ಐದಾರು ಕಿಲೋಮೀಟರ್ ನಂತರ ಈ ಆನಂದ್‌ನಗರ ಬಡಾವಣೆ ಇದೆ. ಅದು ಕೊಳಚೆ ಪ್ರದೇಶವಾಗಿದೆ. ನಮ್ಮ ರಾಜ್ಯದಲ್ಲಿ ಅಥವಾ ನಮ್ಮ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿ ಉಂಟಾದಾಗ ಹೊರಗಿನ ಮಂದಿ ಬಂದು ಸಣ್ಣ ಸಣ್ಣ ಗುಡಿಸಲುಗಳನ್ನು ಅಲ್ಲಿ ಹಾಕಿಕೊಂಡು ವಾಸಿಸುತ್ತಿದ್ದರು. ನೋಟೀಸ್ ಕೊಡಲಾರದೆ ಅಕಸ್ಮಾತ್ತಾಗಿ ಒಂದು ದಿವಸ ಗುಡಿಸಲು ಕಿತ್ತುಹಾಕಿದ್ದಾರೆ. ಹಾಗೂ ತೆಗೆದುಹಾಕಿದ ನಂತರ ಯಾರು ಯಾರು.....

ಅಧ್ಯಕ್ಷರು.—ಹಿಂಡಸಗೇರಿಯವರೇ, ಕೊನೆಯಲ್ಲಿ ಹೇಳಿದ್ದಾರೆ ನೋಡಿ. "ಆ ಪ್ರಸ್ತಾವವನ್ನು ಕಾರ್ಯಗತಗೊಳಿಸಿ ಬಡವರಿಗಾಗಿ ನಿವೇಶನಗಳನ್ನು ಹಂಚಲು ನಿರ್ಣಯಿಸಿದಲ್ಲಿ ಈಗ ತೆಗೆದುಹಾಕಿದ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಜನರು ಅರ್ಜಿ ಹಾಕಿದಲ್ಲಿ ಅವರ ಬೇಡಿಕೆಗಳನ್ನು ಪರಿಗಣಿಸಲಾಗುವುದು" ಎಂದು ಅರ್ಜಿ ಹಾಕಲಿ. ಜಾಗ ಕೊಡಿಸುತ್ತಾರೆ.

ಶ್ರೀ ಎ. ಎಂ. ಹಿಂಡಸಗೇರಿ.—ಯಾರು ಯಾರು ಬಡವರು ಅರ್ಜಿ ಹಾಕುತ್ತಾರೆ, ಅವರ ಕಡೆಯಿಂದ ೫೦-೫೦ ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಅದು ಪೇಪರ್‌ನಲ್ಲಿ ಬಂದಿದೆ. ಮಹಾನಗರಸಭೆ ಸದಸ್ಯರ ಕೈವಾಡ ಅದರಲ್ಲಿದೆ. ಅವರೂ ಸಹ ೫೦ ರೂಪಾಯಿ ತೆಗೆದುಕೊಳ್ಳುವುದಕ್ಕೆ ಹತ್ತಿದ್ದಾರೆ. ಬಡವರ ಹತ್ತಿರ ತೆಗೆದುಕೊಳ್ಳುತ್ತಿದ್ದಾರೆ. ಪೇಪರ್‌ನಲ್ಲಿ ಆ ವಿಷಯ ಬಂದಿದೆ. ನಾನು ಮಾನ್ಯ ಮಂತ್ರಿಗಳನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಅರ್ಜಿಯನ್ನು ಕಾರ್ಪೊರೇಷನ್ ಮತಿಯಿಂದ ಮಾತ್ರ ಕೊಡಬೇಕು. ಅವರೇ ಇಡೆಂಟಿಫೈ ಮಾಡಬೇಕು. ಅಲ್ಲಿಂದಲೇ ಇಷ್ಯೂ ಮಾಡಬೇಕು. ಮತ್ತು ಯಾರು ಸದಸ್ಯರು ಹಣ ತೆಗೆದುಕೊಂಡಿದ್ದಾರೋ ಅದರ ಬಗ್ಗೆ ಸಿ.ಓ.ಡಿ. ತನಿಖೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಗುಡಿಸಲು ಹಾಕುವುದಕ್ಕೆ ಅವರು ಪ್ರಯತ್ನ ಮಾಡುತ್ತಿದ್ದರು. ಅವರಿಗೆ ನೋಟೀಸ್ ಕೊಡುವುದಕ್ಕೆ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದಾರೆ. ಅವರು ಹೆಸರುಗಳು ಕೊಡುವುದಕ್ಕೆ ಸಿದ್ಧರಾಗಿಲ್ಲ. ಆದ್ದರಿಂದ ಸಾರ್ವಜನಿಕವಾಗಿ ನೋಟೀಸನ್ನು ಬೋರ್ಡ್ ಹಾಕುವುದರ ಮುಖಾಂತರ ಕೊಟ್ಟಿದ್ದಾರೆ. ಆಮೇಲೆ ಲಂಚ ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಲಂಚ ಕೊಡಬೇಡಿ ಎಂದು ಹೇಳುತ್ತೇನೆ. ಮನೆ, ನಿವೇಶನ ಇಲ್ಲದೇ ಇರುವವರಿಗೆ ೭ ಸಾವಿರ ನಿವೇಶನದಲ್ಲಿ ಮನೆಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಅದರ ಬಗ್ಗೆ ಬೇಗ ನಿರ್ಣಯ ತೆಗೆದುಕೊಳ್ಳುತ್ತೇವೆ. ಅಲ್ಲಿ ಅರ್ಜಿ ಸಲ್ಲಿಸಿದರೆ ಮನೆ ಇಲ್ಲದೇ ಇರುವವರಿಗೆ ನಿವೇಶನ ಇಲ್ಲದೇ ಇರುವವರಿಗೆ ಕೊಡುವುದಕ್ಕೆ ಎಲ್ಲ ಪ್ರಯತ್ನವನ್ನೂ ಮಾಡುತ್ತೇವೆ. ಬೇರೆಯವರಿಗೆ ಲಂಚ ಕೊಡುವುದು ಬೇಡ ಎಂದು ಹೇಳುತ್ತೇನೆ. ಜನ ಕೊಡುವವರು ಇದ್ದರೆ, ತೆಗೆದುಕೊಳ್ಳುವವರೂ ಇದ್ದಾರೆ ಈ ಸಮಾಜದಲ್ಲಿ. ಈ ಕೆಲಸಕ್ಕೆ ಹಣವನ್ನು ಕೊಡಬೇಕಾಗಿಲ್ಲವೆಂದು ಸನ್ಮಾನ್ಯ ಸದಸ್ಯರಲ್ಲಿ ವಿನಂತಿಸುತ್ತೇನೆ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಯನ್ನು ಕೇಳಿದವರು ಅವರು. ನೀವು ಏಕೆ ಈ ರೀತಿ ಮಧ್ಯದಲ್ಲಿ ಎದ್ದು ನಿಂತು ಮಾತನಾಡುತ್ತೀರಿ ?

ಶ್ರೀ ಎ. ಎಂ. ಹಿಂಡಸಗೇರಿ.—ಕಾರ್ಪೊರೇಷನ್ ಮತಿಯಿಂದ ಅರ್ಜಿಯನ್ನು ತೆಗೆದುಕೊಳ್ಳಬೇಕು. ಅಥವಾ ಟೌನ್ ಪ್ಲಾನಿಂಗ್ ಇಲಾಖೆಯ ಮತಿಯಿಂದ ಮಾತ್ರ ಅರ್ಜಿಗಳನ್ನು ತೆಗೆದುಕೊಳ್ಳಬೇಕು. ಆ ಬಗ್ಗೆ ಜನರಿಗೆ ಪತ್ರಿಕಾ ಹೇಳಿಕೆಯನ್ನು ನೀಡಿ ತಿಳುವಳಿಕೆಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ೫೦ ರೂಪಾಯಿಗಳನ್ನು ಕೊಟ್ಟರೆ ಒಂದು ಅರ್ಜಿಯನ್ನು ತೆಗೆದುಕೊಳ್ಳುತ್ತಿದ್ದಾರೆ. ಇದರಲ್ಲಿ ನಗರ ಸಭೆ ಸದಸ್ಯರೊಬ್ಬರು ಇನ್ವಾಲ್ವ್ ಆಗಿದ್ದಾರೆ. ಆದರೆ ಸಲುವಾಗಿ ಆ ಬಗ್ಗೆ ವಿಚಾರಣೆಯಾಗಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಯಾವ ರೀತಿ ಅರ್ಜಿಯನ್ನು ಸಲ್ಲಿಸಬೇಕೆಂಬುದರ ಬಗ್ಗೆ ನಗರಸಭೆಯವರು ಪ್ರಕಟಣೆಯೊಂದನ್ನು ಹೊರಡಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಹಣವನ್ನು ತೆಗೆದುಕೊಂಡಿದ್ದಾರೆಂದರೆ ಈ ದೇಶದಲ್ಲಿ ಅದಕ್ಕೆ ಸಾಕ್ಷಿ ಕೊಡುವವರೇ ಇಲ್ಲ. ಅಂತಹವರು ಯಾರಾದರೂ ದೂರನ್ನು ಕೊಟ್ಟರೆ ನಾನು ಅದನ್ನು ವಿಚಾರಿಸುತ್ತೇನೆ. ಇದಕ್ಕೆಲ್ಲಾ ಸಿ.ಓ.ಡಿ. ಯಿಂದ ತನಿಖೆ ಮಾಡಿಸುವುದಕ್ಕಾಗುತ್ತದೆಯೇ ? ನಿತ್ಯ ನಡೆಯತಕ್ಕ ವಿಚಾರ ಇದು. ಆದಷ್ಟು ಬೇಗ ಆವರಿಗೆ ನಿವೇಶನವನ್ನು ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.